# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1013 (1073)

ವಿಧಾನ ಪರಿಷತ್ತಿನ ಸದಸ್ಯರು : ಡಾ. ಉಮಾಶ್ರೀ
(ನಾಮನಿರ್ದೇಶಿತರ ಕ್ಷೇತ್ರ)

ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ : 16.12.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆಯ ವೇಮಗಲ್ ಹೋಬಳಿಯಲ್ಲಿ ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣಾ ಘಟಕ ಸ್ಥಾಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಇದಕ್ಕಾಗಿ ಎಷ್ಟು ಎಕರೆ ಪ್ರದೇಶದ ಜಾಗದ ಅವಶ್ಯಕತೆ ಇದೆ; ಅವಶ್ಯಕತೆ ಇರುವಂತ ಜಮೀನನ್ನು ಈಗಾಗಲೇ ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ | ಸರ್ಕಾರದ ಆದೇಶ ಸಂಖ್ಯೆ: ಸಿಐ 323 ಎಸ್‌ಪಿಐ 2024, ದಿನಾಂಕ: 29.10.2024, 02.12.2024 & 18.06.2025 ರಂತೆ ಮೆ\|\| ಟಾಟ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ರವರು ಕೋಲಾರ ಜಿಲ್ಲೆ ವೇಮಗಲ್ ಕೈಗಾರಿಕಾ ಪ್ರದೇಶದ ಫೇಸ್-1 ರಲ್ಲಿನ 17 ಎಕರೆ ಕೆಐಎಡಿಬಿ ಭೂಮಿಯಲ್ಲಿ ಒಟ್ಟು ರೂ.500 ಕೋಟಿ ಬಂಡವಾಳ ಹೂಡಿಕೆಯಲ್ಲಿ "Aircraft Manufacturing – Final Assembly Line (FAL) including MRO (Rotary and Fixed Wing Aircraft and cater to platforms using future technologies related to Vertical Lift such as electric propulsion, unmanned systems etc)" ಉತ್ಪಾದನೆಯ ಯೋಜನೆಯನ್ನು 2025 ರಿಂದ 2033 ರ ಅವಧಿಯಲ್ಲಿ 3 ಹಂತಗಳಲ್ಲಿ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. |
| ಆ | ಏರ್‌ಬಸ್-ಟಾಟಾ ಕಂಪನಿ ಜಂಟಿ ಯೋಜನೆಯ ಈ ಘಟಕಕ್ಕೆ ಸರ್ಕಾರದಿಂದ ನೀಡಲಾಗುತ್ತಿರುವ ಸಹಕಾರ ಏನು; | ಟಾಟಾ ಅಡ್ವಾನ್ಸ್ ಸಿಸ್ಟಮ್ಸ್ ಘಟಕಕ್ಕೆ ಕೆ.ಐ.ಎ.ಡಿ.ಬಿ ವತಿಯಿಂದ ಈಗಾಗಲೇ 17.00 ಎಕರೆ ಜಮೀನು ಹಂಚಿಕೆಯಾಗಿರುತ್ತದೆ. |
| ಇ | ನೋಂದಣಿ ಶುಲ್ಕದ ಸೌಲಭ್ಯ, ವಿದ್ಯುತ್ ದರದಲ್ಲಿ ವಿನಾಯಿತಿ ಇವುಗಳನ್ನು ಸರ್ಕಾರ ನೀಡಲು ಒಪ್ಪಿಗೆ ಸೂಚಿಸಿದೆಯೇ; | ಕೈಗಾರಿಕಾ ನೀತಿ 2025-30 ರಡಿ ಲಭ್ಯವಿರುವ ಪ್ರೋತ್ಸಾಹ & ಉತ್ತೇಜನೆಗಳನ್ನು ನೀಡಲಾಗುತ್ತದೆ. |
| ಈ | ಈ ಘಟಕ ಪ್ರಾರಂಭಗೊಂಡಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ನೀಡಲು ಪ್ರಾಮುಖ್ಯತೆ ನೀಡಲಾಗುವುದೇ? | ಕೈಗಾರಿಕಾ ನೀತಿಯಡಿ ಪ್ರೋತ್ಸಾಹಕ ಮತ್ತು ಉತ್ತೇಜನಗಳನ್ನು ಪಡೆಯಲು ಗ್ರೂಪ್-ಡಿ ರಲ್ಲಿ ಶೇ. 100 ರಷ್ಟು ಒಟ್ಟಾರೆ ಶೇ. 70 ರಷ್ಟು ಉದ್ಯೋಗವಕಾಶಗಳನ್ನು ಸ್ಥಳೀಯರಿಗೆ ನೀಡಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. |

**ಸಿಐ 380 ಎಸ್‌ಪಿಐ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು